# ದಿಗ್ವೇಶ್ ‘ನೋಟ್ ಬುಕ್ ಬರಹ’ದ ಚೇಷ್ಟೆ

ನಿಗೂಢ ಎಂಬ ಕಾರಣಕ್ಕೆ ಈ ಬಾರಿಯ ಐಪಿಎಲ್‌ನಲ್ಲಿ ಗಮನಸೆಳೆದಿರುವ ಸ್ಪಿನ್ ಬೌಲರ್ ದಿಗ್ವೇಶ್ ರಾಠಿ, ಒಂದು ಪಂದ್ಯ ನಿಷೇಧಕ್ಕೆ ಒಳಗಾಗುವ ಮಟ್ಟಕ್ಕೆ ನಿಯಮ ಉಲ್ಲಂಘಿಸಿ ಸುದ್ದಿಯಾದರು. ವರ್ತನೆಯನ್ನು ಹದ್ದುಬಸ್ತಿನಲ್ಲಿ ಇಡದೆ ಇದ್ದರೆ ಅವರಿಗೆ ಕಷ್ಟ ಎಂದು ಅನೇಕರು ಕಿವಿಮಾತು ಹೇಳುತ್ತಿದ್ದಾರೆ.

■ ವಿಶಾಖ ಎನ್.

ಕರ್ನಾಟಕದ ವಿಕೆಟ್ ಕೀಪರ್ ತಿಲಕ್ ನಾಯ್ಡು ಅವರಿಗೆ ದೇಸಿ ಸೊಗಡಿನ ಬೈಗುಳ ಬಳಸಿ, ಎದುರಾಳಿ ತಂಡದವರನ್ನು ಕಾಡುವ ಗುಣ ಇತ್ತು. ಆಸ್ಟ್ರೇಲಿಯಾ ಕ್ರಿಕೆಟಿಗರು ಇದನ್ನೇ ರಕ್ತಗತ ಮಾಡಿಕೊಂಡು ಆಟದ ಘನತೆಯನ್ನು ಲೆಕ್ಕವಿಲ್ಲದಷ್ಟು ಸಲ ಕುಸಿಯುವಂತೆ ಮಾಡಿದ್ದಾರೆ. ಮೈದಾನದಲ್ಲಿ ಆಡುವಾಗ ಆವೇಶ ಬರುವುದು ಸಹಜ. ಅದು ಆಟದ ಪ್ರಮುಖ ತಿರುವಿನಲ್ಲಿ ಅಂತ್ಯಗೊಂಡು, ಸುಖಾನುಭವವನ್ನೊ ನಿರಾಳತೆಯನ್ನೊ ನೀಡಬೇಕು. ಅದು ಬಿಟ್ಟು ಹುಚ್ಚು ಹುಚ್ಚಾಗಿ ವರ್ತಿಸುವುದೇ ಚಾಳಿ ಆಗಕೂಡದು.

ಲಖನೌ ಸೂಪರ್ ಜೈಂಟ್ಸ್ (ಎಲ್‌ಎಸ್‌ಜಿ) ತಂಡದ ಸ್ಪಿನ್ನರ್ ದಿಗ್ವೇಶ್ ರಾಠಿ ಅಂತಹ ಚಾಳಿಯೊಂದನ್ನು ಈ ಸಲದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್)ನಲ್ಲಿ ಕಾಣಿಸಿದ್ದಾರೆ. ವಿಕೆಟ್ ಪಡೆದಾಗ, ನೋಟ್ ಪುಸ್ತಕದಲ್ಲಿ ಗೀಚುವಂತಹ ಸಂಜ್ಞೆ ಮಾಡುವುದು ದಿಗ್ವೇಶ್ ‘ಸೆಲೆಬ್ರೇಷನ್ ಮೋಡ್’. ಏಪ್ರಿಲ್ 1ರಂದು ಪಂಜಾಬ್ ಕಿಂಗ್ಸ್ (ಪಿಬಿಕೆ ಎಸ್) ತಂಡದ ಎದುರು ಹೀಗೆ ಮಾಡಿ, ಅಂಪೈರ್‌ಗಳ ಕೆಂಗಣ್ಣಿಗೆ ಗುರಿಯಾದರು. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ನಿಯಮಾವಳಿಗಳ ಆರ್ಟಿಕಲ್ 2.5 ಪ್ರಕಾರ ಮೊದಲ ಹಂತದ ಹದ್ದುಮೀರಿದ ಪ್ರಸಂಗ ಎಂದು ಅಂಪೈರ್‌ಗಳು ನಿರ್ಧರಿಸಿದರು. ಏಪ್ರಿಲ್ 4ರಂದು ‘ಮುಂಬೈ ಇಂಡಿಯನ್ಸ್’ ತಂಡದ ಎದುರು ಅದೇ ವರ್ತನೆಯನ್ನು ದಿಗ್ವೇಶ್ ಪುನರಾವರ್ತಿಸಿದರು. ಮೊದಲ ಸಲ ಒಂದು ಡಿಮೆರಿಟ್ ಪಾಯಿಂಟ್ ಹೇರಿದ್ದ ಅಂಪೈರ್‌ಗಳು, ಎರಡನೇ ಸಲ ಎರಡು ಡಿಮೆರಿಟ್ ಪಾಯಿಂಟ್‌ಗಳನ್ನು ವಿಧಿಸಿದರು. ಅಷ್ಟಾದರೂ ದಿಗ್ವೇಶ್ ಎಚ್ಚೆತ್ತುಕೊಳ್ಳಲಿಲ್ಲ.

‘ಸನ್‌ರೈಸರ್ಸ್ ಹೈದರಾಬಾದ್’ ತಂಡದ ವಿರುದ್ಧದ ಪಂದ್ಯದಲ್ಲಿ ಇನ್ನೂ ಒಂದು ಹಂತ ಮುಂದಕ್ಕೆ ತೆಗೆದುಕೊಂಡು ಹೋಗಿ, ಅಭಿಷೇಕ್ ಶರ್ಮಾ ಜೊತೆ ಜಗಳಕ್ಕೆ ಇಳಿದರು. ಅಲ್ಲಿಗೆ ಐದು ಡಿಮೆರಿಟ್ ಪಾಯಿಂಟ್‌ಗಳನ್ನು ಅಂಪೈರ್‌ಗಳು ವಿಧಿಸಿ, ಒಂದು ಪಂದ್ಯದ ಮಟ್ಟಿಗೆ ನಿಷೇಧದ ಶಿಕ್ಷೆಯನ್ನೂ ವಿಧಿಸಿದರು. ಪಂದ್ಯ ಶುಲ್ಕದ ದಂಡ ಕಟ್ಟುವಂತೆ ಮಾಡುವುದರ ಜೊತೆಗೆ ಇಂತಹುದೊಂದು ಶಿಕ್ಷೆಗೆ ವೃತ್ತಿಬದುಕಿನ ಆರಂಭದ ದಿನಗಳಲ್ಲೇ ದಿಗ್ವೇಶ್ ಎದುರಾಗಬೇಕಾಯಿತು. ಅದು ಅವರೇ ಮೈಮೇಲೆ ಎಳೆದುಕೊಂಡಿದ್ದು ಎನ್ನುವುದರಲ್ಲಿ ಅನುಮಾನವೇ ಇಲ್ಲ. ಮೊದಲ ಸಲ ನಿಯಮ ಉಲ್ಲಂಘನೆಯ ಕಾರಣಕ್ಕೆ ಪಂದ್ಯದ ಶೇ. 25ರಷ್ಟು, ಆಮೇಲೆ ಎರಡು ಸಲ ಪಂದ್ಯಗಳ ಶೇ. 50ರಷ್ಟು ಸಂಭಾವನೆಯನ್ನು ದಂಡವಾಗಿ ಅವರು ಕಟ್ಟಬೇಕಾಗಿ ಬಂತು. ಮೂರನೇ ಬಾರಿ ಅರ್ಧದಷ್ಟು ಸಂಭಾವನೆಯನ್ನು ದಂಡ ಆಗಿ ಕಟ್ಟಿದ್ದರ ಜೊತೆಗೆ ಒಂದು ಪಂದ್ಯದ ಮಟ್ಟಿಗೆ ನಿಷೇಧದ ಶಿಕ್ಷೆ ಅನುಭವಿಸಬೇಕಾಗಿ ಬಂತು.

ದಿಗ್ವೇಶ್ ಫೇಸ್‌ಬುಕ್‌ನ ಪ್ರೊಫೈಲ್ ಫೋಟೊ ವೆಸ್ಟ್ ಇಂಡೀಸ್‌ನ ಸುನಿಲ್ ನಾರಾಯಣ್ ಅವರದ್ದು. ದೆಹಲಿಯ ಈ ಹುಡುಗನಿಗೆ ಸುನಿಲ್ ಚಿಕ್ಕಂದಿನಿಂದಲೂ ಮೆಚ್ಚು. ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ ನೆಟ್ಸ್ ಬೌಲರ್ ಆಗಿ ಹೋದಾಗ ಅವರು ಸುನಿಲ್ ಬೌಲಿಂಗ್ ಶೈಲಿಯನ್ನು ಸೂಕ್ಷ್ಮವಾಗಿ ಗಮನಿಸಿದರು. ಅಷ್ಟೇ ಅಲ್ಲದೆ ಅದನ್ನು ತಾವೂ ಅನುಕರಿಸಿದರು.

ದೆಹಲಿಯ ದ್ರೋಣಾಚಾರ್ಯ ಕ್ರಿಕೆಟ್ ಅಕಾಡೆಮಿಯಲ್ಲಿ ಕೋಚ್ ಆಗಿರುವ ಸಚಿನ್ ಶುಕ್ಲಾ ಅವರಿಗೆ ಈ ಹುಡುಗನ ಪ್ರತಿಭೆಯ ಮೇಲೆ ಅಪಾರ ವಿಶ್ವಾಸವಿದೆ. ಆದರೆ, ಪದೇಪದೇ ಕ್ರಿಕೆಟ್ ನಿಯಮ ಉಲ್ಲಂಘಿಸುವ, ಎದುರಾಳಿ ತಂಡದ ಅನುಭವಿ ಆಟಗಾರನನ್ನು ಕಿಚಾಯಿಸುವ ಚಾಳಿ ಬೆಳೆಸಿಕೊಳ್ಳುವುದನ್ನು ಅವರೂ ಒಪ್ಪುವುದಿಲ್ಲ. ‘ಇನ್ನೂ ವೃತ್ತಿಬದುಕಿನ ಪ್ರಾರಂಭದಲ್ಲಿ ಪಾಠ ಕಲಿಯುತ್ತಿರುವ ಹುಡುಗ ಅವನು. ಈಗಲೇ ಅಂತಹ ವರ್ತನೆ ಸರಿಯಲ್ಲ’ ಎಂದು ಅವರು ನಿರ್ದಾಕ್ಷಿಣ್ಯವಾಗಿ ಪ್ರತಿಕ್ರಿಯಿಸಿದರು.

ಇಷ್ಟಾದರೂ ದಿಗ್ವೇಶ್ ಕ್ರಿಕೆಟ್ ಪ್ರೀತಿಯ ಬಗ್ಗೆ ಯಾರಿಗೂ ಅನುಮಾನಗಳಿಲ್ಲ. ದೆಹಲಿಯಲ್ಲಿ ಸ್ಥಳೀಯ ಲೀಗ್ ಆಡಿದಾಗ ಅವರ ಸಾಮರ್ಥ್ಯ ಕಂಡೇ ಅವರನ್ನು ಐಪಿಎಲ್ ಆಡಲು ಹೆಕ್ಕಿದ್ದರಲ್ಲಿ ಕೋಚ್ ಶರಣ್ ದೀಪ್ ಸಿಂಗ್ ಅವರ ಪಾತ್ರ ಇದೆ. ಬೆಳೆಯುವ ಹಂತದಲ್ಲಿ ಹೀಗೆಲ್ಲ ಗಮನ ಅತ್ತಿತ್ತ ಹೋಗಬಾರದು ಎನ್ನುವುದನ್ನು ಅವರೂ ಒಪ್ಪುತ್ತಾರೆ.

ಐಪಿಎಲ್ ಕ್ರಿಕೆಟ್‌ನಲ್ಲಿ ಈ ಋತುವಿನಲ್ಲಿ ದಿಗ್ವೇಶ್ 12 ಪಂದ್ಯಗಳಲ್ಲಿ 14 ವಿಕೆಟ್ ಪಡೆದು ತಮ್ಮ ಸಾಮರ್ಥ್ಯ ರುಜುವಾತು ಮಾಡಿದ್ದಾರೆ. ಅವರ ಎಕಾನಮಿ 8ಕ್ಕಿಂತ ತುಸು ಹೆಚ್ಚು ಇರುವುದು ಕೂಡ ಗಮನಾರ್ಹ. ಇಂತಹ ಹೊತ್ತಿನಲ್ಲಿ ಬುದ್ಧಿಯನ್ನು ಸ್ಥಿಮಿತದಲ್ಲಿ ಇಟ್ಟುಕೊಂಡು ವರ್ತನೆಯನ್ನು ನಿಯಂತ್ರಿಸಿಕೊಳ್ಳಬೇಕು. ಸ್ಪರ್ಧೆ ತುರುಸಾಗಿ ಇರುವ ಕ್ರಿಕೆಟ್‌ನಲ್ಲಿ ದಿಢೀರ್ ಖ್ಯಾತಿಯನ್ನು ನಿಭಾಯಿಸಿ ಮುಂದುವರೆಯುವುದೂ ಒಂದು ಕಲೆ.

ಪ್ರತಿಕ್ರಿಯಿಸಿ: feedback@sudha.co.in

